# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 351 |
| ವಿಧಾನ ಪರಿಷತ್ ಸದಸ್ಯರು | ಶ್ರೀ ಶಿವಣ್ಣ ಬಿ.ಎಸ್.<br>(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 19.08.2026 |
| ಉತ್ತರಿಸುವ ಸಚಿವರು | ಉಪ ಮುಖ್ಯಮಂತ್ರಿಗಳು, ಕಂದಾಯ<br>ಹಾಗೂ ಕ್ರೀಡಾ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಜಾತಿ, ಆದಾಯ ಹಾಗೂ ನಿವಾಸ ಪ್ರಮಾಣ ಪತ್ರಗಳಿಗೆ ನಿತ್ಯವೂ 2 ಲಕ್ಷಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗುತ್ತಿರುವುದು ಮತ್ತು ನಿಯಮಿತ ಅವಧಿಯಲ್ಲಿ ಇವು ಲಭ್ಯವಾಗದೆ ಉದ್ಯೋಗಾಕಾಂಕ್ಷಿಗಳು ಹಾಗೂ ವಿದ್ಯಾರ್ಥಿಗಳು ತೀವ್ರ ತೊಂದರೆ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| (ಆ) | ಪ್ರಮಾಣ ಪತ್ರಗಳ ವಿಲೇವಾರಿಗಾಗಿ ಅಳವಡಿಸಲಾಗಿರುವ "ಫಸ್ಟ್ ಇನ್ ಔಟ್" (FIFO-ಮೊದಲು ಬಂದ ಅರ್ಜಿ ಮೊದಲು ಇತ್ಯರ್ಥ) ವ್ಯವಸ್ಥೆಯಿಂದಾಗಿ, ಶಾಲಾ-ಕಾಲೇಜು ಪ್ರವೇಶ ಹಾಗೂ ನೇಮಕಾತಿ ಅಂತಿಮ ದಿನಾಂಕ ಹತ್ತಿರವಿರುವ ತುರ್ತು ಅಗತ್ಯವಿರುವ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರಗಳು ಸಿಗದೆ ತೊಡಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| (ಇ) | ಸರ್ವರ್ ಸಮಸ್ಯೆ, ಆಧಾರ್ ಆನ್‌ಲೈನ್ ಓಟಿಪಿ ವಿಳಂಬ ಹಾಗೂ ತಾಂತ್ರಿಕ ತೊಡಕುಗಳಿಂದಾಗಿ ಗ್ರಾಮಾಂತರ ಕೇಂದ್ರಗಳಲ್ಲಿ (ನಾಡಕಚೇರಿ /ಕರ್ನಾಟಕ ಒನ್ ಅರ್ಜಿ ಸಲ್ಲಿಕೆ ಮತ್ತು ಪರಿಶೀಲನೆ ಮಂದಗತಿಯಲ್ಲಿ ಸಾಗುತ್ತಿರುವುದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ತುರ್ತು ಕ್ರಮಗಳೇನು; | ಸರ್ವರ್ ಅಥವಾ ತಾಂತ್ರಿಕ ತೊಡಕುಗಳಿಂದ ಮತ್ತು ಓಟಿಪಿ ವಿಳಂಬವಾಗಿದ್ದಲ್ಲಿ ಸದರಿ ತಾಂತ್ರಿಕ ದೋಷಗಳು ತ್ವರಿತವಾಗಿ ನಿವಾರಿಸಲು 02 ಡೇಟಾಬೇಸ್ ಸರ್ವರ್‌ಗಳನ್ನು ಹಾಗೂ 10 ಅಪ್ಲಿಕೇಷನ್ ಸರ್ವರ್‌ಗಳನ್ನು ಕೆಎಸ್‌ಡಿಸಿ ರವರಿಂದ ಪಡೆಯಲಾಗಿದ್ದು, ಸಾರ್ವಜನಿಕರಿಗೆ ಸೇವೆಗಳನ್ನು ಯಾವುದೇ ಅಡಚಣೆಯಿಲ್ಲದೆ ತ್ವರಿತವಾಗಿ ಮತ್ತು ಪರಿಣಾಮಕಾರಿಯಾಗಿ ಒದಗಿಸುವ ನಿಟ್ಟಿನಲ್ಲಿ ಅಗತ್ಯ ತಾಂತ್ರಿಕ ಕ್ರಮಗಳನ್ನು ನಿರಂತರವಾಗಿ ಕೈಗೊಳ್ಳಲಾಗುತ್ತಿದೆ. |

| | | |
|---|---|---|
| (ಈ) | ರಾಜ್ಯದಲ್ಲಿ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 72,000ಕ್ಕೂ ಹೆಚ್ಚು ಹುದ್ದೆಗಳ ಭರ್ತಿ ಪ್ರಕ್ರಿಯೆ ನಡೆಯುತ್ತಿರುವುದರಿಂದ ಈ ಅರ್ಜಿಗಳ ತ್ವರಿತ ವಿಲೇವಾರಿಗೆ ಜಿಲ್ಲಾ ಅಥವಾ ವಿಭಾಗೀಯ ಮಟ್ಟದಲ್ಲಿ ಪ್ರತ್ಯೇಕ ಸರ್ವರ್‌ಗಳನ್ನು ಸ್ಥಾಪಿಸುವ ಹಾಗೂ ಅರ್ಜಿ ಸಲ್ಲಿಕೆ ವ್ಯವಸ್ಥೆಯನ್ನು ಸುಲಭಗೊಳಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ? (ವಿವರ ನೀಡುವುದು) | ಎಜಿಎಸ್‌ಕೆ ತಂತ್ರಾಂಶವು ಕೇಂದ್ರೀಕೃತ ಸರ್ವರ್‌ಗಳನ್ನು ಉಪಯೋಗಿಸಿ ಅನುಷ್ಠಾನ ಗೊಳಿಸಲಾಗುತ್ತಿರುವುದರಿಂದ, ಜಿಲ್ಲಾ ಅಥವಾ ವಿಭಾಗೀಯ ಮಟ್ಟದಲ್ಲಿ ಪ್ರತ್ಯೇಕ ಸರ್ವರ್‌ಗಳನ್ನು ಸ್ಥಾಪಿಸುವ ಅಗತ್ಯ ಇರುವುದಿಲ್ಲ.<br><br>ಈಗಾಗಲೇ ಅರ್ಜಿ ಸಲ್ಲಿಕೆ ವ್ಯವಸ್ಥೆಯನ್ನು ಗ್ರಾಮ ಒನ್, ಕರ್ನಾಟಕ ಒನ್, ಬಾಪೂಜಿ ಸೇವಾ ಕೇಂದ್ರ, ಸೇವಾ ಸಿಂಧು, ಸಿಎಸ್‌ಸಿ ಮತ್ತು ಆನ್‌ಲೈನ್ ಮೂಲಕ ಸಲ್ಲಿಸಲು ಈಗಾಗಲೇ ಸುಲಭವಾಗಿ ಅವಕಾಶ ಮಾಡಿಕೊಡಲಾಗಿರುತ್ತದೆ. |

**ಸಂಖ್ಯೆ: ಕಂಇ 58 ಎಜಿಎಸ್ 2026**

(ಡಾ. ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿಗಳು,
ಕಂದಾಯ ಹಾಗೂ ಕ್ರೀಡಾ ಸಚಿವರು